# ಮದುವೆ ಇನ್ನೂ ದೂರ

ಅನುಷ್ಕಾ ಶರ್ಮಾ ಮತ್ತು ವಿರಾಟ್ ಕೊಹ್ಲಿ ತಮ್ಮಿಬ್ಬರ ಸಂಬಂಧವನ್ನು ಗುಟ್ಟಾಗಿ ಇರಿಸಿಲ್ಲ. ಮಾಧ್ಯಮಗಳು ಅಷ್ಟೆಲ್ಲಾ ಗುಲ್ಲೆಬ್ಬಿಸಿದ ಬಳಿಕ ಇನ್ನೂ ಗುಟ್ಟು ಉಳಿಸಿಕೊಳ್ಳುವುದೇನು ಎಂದು ಅನುಷ್ಕಾ ಇತ್ತೀಚೆಗಷ್ಟೇ ತಾವಿಬ್ಬರೂ ಡೇಟಿಂಗ್ ನಡೆಸುತ್ತಿರುವುದನ್ನು ಬಹಿರಂಗವಾಗಿ ಒಪ್ಪಿಕೊಂಡಿದ್ದಳು. 'ನಾವು ಯಾವುದನ್ನೂ ಮುಚ್ಚಿಡುತ್ತಿಲ್ಲ' ಎಂದಿದ್ದ ಆಕೆ, ಈ ಗಾಸಿಪ್‌ಗಳು ತನ್ನನ್ನು ಹೆಚ್ಚು ಕಂಫರ್ಟಬಲ್ ಮಾಡಿವೆ ಎಂದಿದ್ದಳು. ಸಾರ್ವಜನಿಕ ವ್ಯಕ್ತಿಗಳಾಗಿರುವುದರಿಂದ ತಮ್ಮ ಸಂಬಂಧಗಳು ಜನರ ಮನರಂಜನೆಯ ವಸ್ತುವಾಗಿರುತ್ತದೆ ಎನ್ನುವುದು ಆಕೆಯ ಅಭಿಪ್ರಾಯ. ಈ ನಡುವೆ ಅನುಷ್ಕಾ ಮತ್ತು ಕೊಹ್ಲಿ 2016ರಲ್ಲಿ ಹಸೆಮಣೆ ಏರುತ್ತಾರೆ ಎನ್ನುವ ಗಾಳಿಸುದ್ದಿ ಸಹ ಹರಡಿತ್ತು. ಇದಕ್ಕೆ ಕಾರಣ, ಅನುಷ್ಕಾ, ಕೊಹ್ಲಿ ಮತ್ತು ಆತನ ತಂದೆಯೊಂದಿಗೆ ಒಟ್ಟಿಗೆ ಕಾಣಿಸಿಕೊಂಡಿದ್ದು. ಅವರು ಹೊಸ ಮನೆಯನ್ನು ಹುಡುಕುತ್ತಿದ್ದಾರೆ ಎನ್ನುವ ಗಾಳಿಸುದ್ದಿ ಇದರ ಬೆನ್ನಲ್ಲೇ ಹರಡತೊಡಗಿತ್ತು. ಮದುವೆಯ ಆಲೋಚನೆಯಲ್ಲಿರುವುದರಿಂದ ತಮ್ಮ ಸಂಬಂಧದ ಕುರಿತು ಮುಕ್ತವಾಗಿ ಇಬ್ಬರೂ ಮಾತನಾಡುತ್ತಿದ್ದಾರೆ. ಶೀಘ್ರದಲ್ಲಿಯೇ ಎರಡೂ ಕುಟುಂಬದವರು ಭೇಟಿಯಾಗಿ ಮದುವೆ ಮಾತುಕತೆ ನಡೆಸಲಿದ್ದಾರೆ. ಮುಂದಿನ ವರ್ಷ ಇಬ್ಬರ ಕಂಕಣ ಖಚಿತ ಎನ್ನಲಾಗಿತ್ತು. ಆದರೆ, ಇದೆಲ್ಲಾ ಸುಳ್ಳು ಎಂದು ಖಡಾಖಂಡಿತವಾಗಿ ನಿರಾಕರಿಸಿದ್ದಾಳೆ ಅನುಷ್ಕಾ. 'ತರಾತುರಿಯಲ್ಲಿ ಮದುವೆಯ ತಯಾರಿ ನಡೆಯುತ್ತಿಲ್ಲ. ಅನುಷ್ಕಾ ಸದ್ಯ ಸಿನಿಮಾಗಳಲ್ಲಿ ಮಗ್ನ. ತನ್ನ ಕೆಲಸಗಳಲ್ಲಿ ಆಕೆ ಖುಷಿಯಾಗಿ ತೊಡಗಿಸಿ ಕೊಂಡಿದ್ದಾಳೆ. ಆಕೆ ತನ್ನ ಜೀವನದ ಬಗ್ಗೆ ಮುಕ್ತವಾಗಿ ಹೇಳಿಕೊಳ್ಳುತ್ತಿದ್ದಾಳೆ. ಹೀಗಾಗಿ ಊಹಾಪೋಹ ಹರಡುವ ಬದಲು ಆಕೆ ಸ್ವತಃ ಘೋಷಣೆ ಮಾಡುವವರೆಗೂ ಕಾಯಿರಿ' ಎಂದು ಆಕೆಯ ಪರವಾಗಿ ಆಪ್ತವಲಯದಿಂದ ಮನವಿ ಹೊರಬಂದಿದೆ. ಕೊಹ್ಲಿ ಸದ್ಯ ಮೈದಾನದಲ್ಲಿ ಫಾರ್ಮ್‌ಗೆ ಮರಳುವ ಪ್ರಯತ್ನದಲ್ಲಿದ್ದರೆ, ಅನುಷ್ಕಾ 'ಎನ್‌ಎಚ್10' ಮತ್ತು 'ಬಾಂಬೆ ವೆಲ್ವೆಟ್' ಚಿತ್ರಗಳು ನೀಡಿದ ಸೋಲಿನಿಂದ ಚೇತರಿಸಿಕೊಂಡು, ಕರಣ್ ಜೋಹರ್ ನಿರ್ದೇಶನದ 'ಏ ದಿಲ್ ಹೇ ಮುಷ್ಕಿಲ್' ಚಿತ್ರದಲ್ಲಿ ರಣಬೀರ್ ಕಪೂರ್ ಜತೆ ನಟಿಸುವಲ್ಲಿ ಬಿಜಿಯಾಗಿದ್ದಾಳೆ.





# ಬುದ್ಧಿಯಿಲ್ಲದ ವೃತ್ತಿಯಲ್ಲ!

'ಮಾಡೆಲಿಂಗ್ ಎಂದರೆ ಬುದ್ಧಿಗೇಡಿಗಳ ಕಸುಬು' ಎನ್ನುವುದು ಹಲವರ ಅನಿಸಿಕೆ. ಚಿತ್ರವಿಚಿತ್ರ ಉಡುಗೆ ತೊಟ್ಟು ರ್‍ಯಾಂಪ್ ಮೇಲೆ ಮಾರ್ಜಾಲ ನಡಿಗೆ ಇರಿಸುವುದು, ಜನರನ್ನು ಮರುಳು ಮಾಡುವಂತೆ ಉತ್ಪನ್ನಗಳ ಜಾಹೀರಾತುಗಳಿಗೆ ಪ್ರಚಾರ ನೀಡುವುದು ಕೆಲಸವಿಲ್ಲದವರ ಉದ್ಯೋಗ. ತೆಳ್ಳಗಿನ ದೇಹವನ್ನು ಬಳುಕಿಸಿ ಹೋದರಾಯಿತು, ಅದರಲ್ಲೇನು ಶ್ರಮವಿದೆ?ಎನ್ನುವ ಕುಹಕದ ಪ್ರಶ್ನೆ ಅವರದು. ಆದರೆ ಈ ರೀತಿಯ ಟೀಕೆ ತರವಲ್ಲ. ಮಾಡೆಲಿಂಗ್ ನಿಜಕ್ಕೂ ಶ್ರಮ ಬೇಡುವ ಕೆಲಸ ಎಂದಿದ್ದಾಳೆ ನೇಹಾ ಧೂಪಿಯಾ.

ದಂತವೈದ್ಯ, ವಕೀಲಿಕೆ, ಕಾರ್ಪೊರೇಟ್ ವೃತ್ತಿ ಮುಂತಾದ ವಿವಿಧ ಕ್ಷೇತ್ರಗಳಿಂದ ರೂಪದರ್ಶಿಯರಾಗಿ ಯುವತಿಯರು ಬರುತ್ತಾರೆ. ಇದು ಸುಲಭದ ವೃತ್ತಿಯಲ್ಲ. ಗಂಟೆಗಟ್ಟಲೆ ಸಾಕಷ್ಟು ಶ್ರಮ ವಹಿಸಬೇಕು, ಪ್ರತಿದಿನ ಹೊಸ ಬಾಸ್ ಸಿಗುತ್ತಾರೆ, ಪ್ರತಿ ಕೆಲಸವೂ ಹೊಸ ಸವಾಲಿನದ್ದಾಗಿರುತ್ತದೆ ಎನ್ನುವುದು ಆಕೆಯ ವಾದ. ನಟಿಯಾಗಿ ಅಷ್ಟಾಗಿ ಯಶಸ್ಸು ಕಾಣದಿರುವ ನೇಹಾ, ಮಾಡೆಲಿಂಗ್ ಜಗತ್ತಿನಲ್ಲಿ ಹೆಚ್ಚು ವಿಹರಿಸುತ್ತಿದ್ದಾಳೆ. ಸಿನಿಮಾದಲ್ಲಿ ಸಿಗದಿರುವುದನ್ನು ಇಲ್ಲಿ ಪಡೆದುಕೊಂಡ ಖುಷಿ ಆಕೆಯದು. ಮಾಡೆಲಿಂಗ್‌ಗೆ ಬರಬೇಕೆಂದರೆ ವೃತ್ತಿಪರತೆ ಬೇಕು. ನೇತ್ಯಾತ್ಮಕ ಮನೋಭಾವಗಳನ್ನು ಅಳಿಸಿ, ಸಕಾರಾತ್ಮಕ ಧೋರಣೆ ಬೆಳೆಸಿಕೊಳ್ಳಬೇಕು. ಹಾಗೆಂದು ಎಲ್ಲವನ್ನೂ ತಿಳಿದುಕೊಂಡು ಬರಬಾರದು ಎಂದು ಈಕೆ ಮಾಡೆಲಿಂಗ್‌ಗೆ ಬರುವ ಹೊಸ ಮುಖಗಳಿಗೆ ಕಿವಿಮಾತು ಹೇಳುತ್ತಾಳೆ. 'ಮಾಡೆಲಿಂಗ್ ಎನ್ನುವುದು ಅದ್ಭುತ ಕ್ಷೇತ್ರವೇನಲ್ಲ ನಿಜ. ಆದರೆ ಇಲ್ಲಿ ಅಪಾರ ಮೆಚ್ಚುಗೆ ದೊರಕುತ್ತದೆ. ಸ್ಪರ್ಧಾತ್ಮಕ ಕ್ಷೇತ್ರವಿದು. ಮಾನಸಿಕವಾಗಿ ಸಿದ್ಧರಿದ್ದರೆ ಮಾತ್ರ ಒಳನುಗ್ಗಬೇಕು. ನಿಮ್ಮಲ್ಲೇನೋ ಕೊರತೆಯಿದೆ ಎಂದು ಇಲ್ಲಿಗೆ ಪ್ರವೇಶಿಸದೆ ಹಿಂದೇಟು ಹಾಕದಿರಿ' ಎನ್ನುವುದು ನೇಹಾ ವ್ಯಾಖ್ಯಾನ.

■ ಅಮಿ

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65